# MANGALORE MARKET REPORTS

MMR MEDIA Since 1975

REGD. OFFICE : QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 | ENGLISH DAILY | Subscription Yearly - Rs. - | SATURDAY | 3-6-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


### ಭಾರತದ ಅಕ್ಕಿ ರಫ್ತು ದರ ಸ್ವಲ್ಪ ಹೆಚ್ಚಳ

ಜಾಗತಿಕ ದರಕ್ಕೆ ಹೋಲಿಸಿದಾಗ ಭಾರತದ ಅಕ್ಕಿ ದರ ಇಳಿಕೆಯಿರುವುದರಿಂದ ಬೇಡಿಕೆ ಹೆಚ್ಚಳವಾಗಿದ್ದು, ದರ ಸ್ವಲ್ಪ ಮಟ್ಟಿನ ಹೆಚ್ಚಳವಾಗಿದೆ. ಜಾಗತಿಕ ದರ ಹೆಚ್ಚಳವಾಗುತ್ತಿದೆ.

### ಉದ್ದು, ತೊಗರಿ ದಾಸ್ತಾನು ಮಿತಿ ವಿಧಿಸಿದ ಸರಕಾರ

ಹೆಚ್ಚುತ್ತಿರುವ ದರ ನಿಯಂತ್ರಿಸಲು ಕೇಂದ್ರ ಸರಕಾರ ತೊಗರಿ ಹಾಗೂ ಉದ್ದಿನ ಮೇಲೆ ದಾಸ್ತಾನು ಮಿತಿ ವಿಧಿಸಿದೆಯೆನ್ನಲಾಗಿದೆ. ಇದರಂತೆ ಈ ಎರಡೂ ವರ್ಗಗಳಿಗೆ ಸಗಟು ವರ್ತಕರು 200 ಟನ್ ಹಾಗೂ ಚಿಲ್ಲರೆ ವರ್ತಕರು 5ಟನ್ ದಾಸ್ತಾನು ಹೊಂದಬಹುದಾಗಿದೆಯೆನ್ನಲಾಗಿದೆ. ಮಿಲ್‌ಗಳು ಹಿಂದಿನ 3 ತಿಂಗಳು ಉತ್ಪಾದನೆ ಅಥವಾ ವಾರ್ಷಿಕ ಉತ್ಪಾದನಾ ಸಾಮರ್ಥ್ಯದ 25 ಶೇಕಡಾ ದಲ್ಲಿ ಯಾವುದಾದರೂ ಅಧಿಕವೂ ಅಷ್ಟು ದಾಸ್ತಾನು ಹೊಂದಬಹುದಾಗಿದೆಯೆನ್ನಲಾಗಿದೆ. ಆಮದುದಾದರು 30 ದಿನಕ್ಕಿಂತ ಹೆಚ್ಚು ದಾಸ್ತಾನು ಹೊಂದುವಂತಿಲ್ಲವೆನ್ನಲಾಗಿದೆ. ಖಾರೀಫ್ ಬೆಳೆಯ ಉದ್ದು, ತೊಗರಿ, ಕನಿಷ್ಠ ಬೆಂಬಲ ಬೆಲೆ 6–8 ಶೇಕಡಾ ಹೆಚ್ಚಳಮಾಡುವ ಸಾಧ್ಯತೆಗಳಿವೆಯೆನ್ನಲಾಗಿದೆ.

### ಕೋಸ್ಟರಿಕಾ ಕಾಫಿ ಹೆಚ್ಚಳ, ದರ ಇಳಿಕೆ

ಕೋಸ್ಟರಿಕಾ ಕಾಫಿ ಸಂಸ್ಥೆ ಮೇ ತಿಂಗಳ ಕಾಫಿ ರಫ್ತು(ಕೋಸ್ಟರಿಕಾ) ಹಿಂದಿನ ವರ್ಷದ ಮೇ ತಿಂಗಳಿಗಿಂತ 39 ಶೇಕಡಾ ಹೆಚ್ಚಳವಾಗಿ 140,142 ಚೀಲಗಳಾಗಿದೆಯೆಂದು ವರದಿ ಮಾಡಿದೆಯೆನ್ನಲಾಗಿದೆ. ಪೂರೈಕೆ ಹೆಚ್ಚಳ, ಡಾಲರ್ ದರ ಪ್ರಾಬಲ್ಯದಿಂದಾಗಿ ಅರೆಬಿಕಾ ಕಾಫಿ ದರ 2.90(–1.58%) ಹಾಗೂ ರಾಬೆಸ್ಟಾ –31 (–1.19%) (ಜುಲೈ ದರ) ಇಳಿಕೆಯಾಗಿದೆಯೆನ್ನಲಾಗಿದೆ. ಇನ್‌ವೆಂಟರಿ ದಾಸ್ತಾನು ಹಿಂದಿನ 6 ತಿಂಗಳ ಕನಿಷ್ಠ ಮಟ್ಟ 574,443 ಚೀಲಗಳಿಗಿಳಿಸಿದೆಯೆನ್ನಲಾಗಿದೆ. ಅಂತರಾಷ್ಟ್ರೀಯ ಕಾಫಿ ಸಂಸ್ಥೆ – 7.3 ಮಿಲಿಯನ್ ಚೀಲಗಳ ಜಾಗತಿಕ ಕಾಫಿ ಮಾರುಕಟ್ಟೆ ಕೊರತೆಯಾಗಬಹುದೆಂದಿದೆ. ಹವಾಮಾನ ವೈಪರೀತ್ಯದಿಂದ ಉತ್ಪಾದನೆಯಲ್ಲಿ ವ್ಯತ್ಯಾಸವಾಗಬಹುದಾಗಿದೆ. ಸದ್ಯ ದರ ಇಳಿಕೆ ತಾತ್ಕಾಲಿಕವಾಗಿರಬಹುದು ಹಾಗೂ ಪೂರೈಕೆ, ಬೇಡಿಕೆಗಳಿಗನುಸಾರ ದರ ವ್ಯತ್ಯಾಸ ಹೊಂದುವ ಸಾಧ್ಯತೆಯಿದೆ.